(iv) ಚಿಕ್ಕಬಳ್ಳಾಪುರದ ಬೊಮ್ಮನಹಳ್ಳಿಯಲ್ಲಿ ಯುಗಾದಿ ಹಬ್ಬದ ದಿವಸ ಕೆಲವು ಮನೆಗಳು ಸುಟ್ಟು ಹೋಗಿದ್ದು ಅವರಿಗೆ ಸೂಕ್ತ ಪರಿಹಾರವನ್ನು ನೀಡುವ ಬಗ್ಗೆ.

ಶ್ರೀ ಎ. ಮುನಿಯಪ್ಪ.—ಚಿಕ್ಕಬಳ್ಳಾಪುರದ, ಮೆಂಡಿಕಲ್ ಹೋಬಳಿ, ಬೊಮ್ಮನಹಳ್ಳಿಯಲ್ಲಿ ತಾರೀಖು ೨–೪–೮೪ ರಂದು ಯುಗಾದಿ ಹಬ್ಬದ ದಿವಸ ಬೆಂಕಿ ಹತ್ತಿಕೊಂಡಾಗ ೬ ಮನೆಗಳು ಸುಟ್ಟು ಹೋಗಿದೆ, ಇನ್ನು ಬೆಂಕಿ ಹಬ್ಬುವ ಸೂಚನೆ ಇದ್ದುದರಿಂದ ಇನ್ನು ೬ ಮನೆಗಳನ್ನು ಕೆತ್ತು ಹಾಕಿದ್ದಾರೆ. ಆ ಜನ ಹಬ್ಬದ ದಿವಸ ಬಹಳ ತೊಂದರೆಪಟ್ಟಿದ್ದಾರೆ. ನಮ್ಮ ತಾಲ್ಲೂಕಿನ ಅಧಿಕಾರಿಗಳಿಗೆ ಅವರಿಗೆ ಏನಾದರೂ ಪರಿಹಾರ ಕೊಡಿ ಎಂದು ಹೇಳಿದರೆ, ಬಡ್ಜೆಟ್ ಇಲ್ಲವೆಂದು ಹೇಳುತ್ತಿದ್ದಾರೆ. ನಾನು ಅವತ್ತಿನ ದಿವಸ ಸಾರ್ವಜನಿಕರಿಂದ ೨ ಮೂಟೆ ಹಸಿ ಹಿಟ್ಟು ಮತ್ತು ಒಂದು ಮೂಟೆ ಅಕ್ಕಿಯನ್ನು ಕಲೆಕ್ಟ್ ಮಾಡಿ ಅವರಿಗೆ ವಿತರಣೆ ಮಾಡಿ ಬಂದಿದ್ದೇನೆ. ಇಂಥಾ ಪರಿಸ್ಥಿತಿಯಲ್ಲಿ ಅದರಲ್ಲೂ ಬೇಕಿ ಅನಾಹುತವಾಗಿ ಅವರು ತೊಂದರೆಗೆ, ಕಷ್ಟಕ್ಕೆ ಸಿಲುಕಿದಾಗ ಒಂದಿಷ್ಟು ಹಣವನ್ನು ಮಾಸಲಾಗಿಡಬೇಕು. ಆ ರೀತಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ವ್ಯವಹಾರಗಳ ಸಚಿವರು).—ರೆವೆನ್ಯೂ ಅಧಿಕಾರಿಗಳಿಗೆ ಹೇಳಿ ರೀಪೋರ್ಟ್ ತರಿಸಿಕೊಂಡು ನೋಡಿ ಯಾರು ಯಾರಿಗೆ ಪರಿಹಾರ ಕೊಡಬಹುದು ಎನ್ನುವುದನ್ನು ನೋಡಿ ತಕ್ಷಣವೇ ಪರಿಹಾರ ಕೊಡುವ ಬಗ್ಗೆ ಆದೇಶ ನೀಡುತ್ತೇನೆ.

ಶ್ರೀ ಎ. ರುಕ್ಮಯ್ಯಪೂಜಾರಿ.—ಮಾನ್ಯ ಅಧ್ಯಕ್ಷರೇ, ಇದೇ ೬ನೇ ತಾರೀಖು ಶುಕ್ರವಾರ ಸಂಜೆ ಸುಮಾರು ೮ ಘಂಟೆ ಸಮಯದಲ್ಲಿ ೬೫ ವರ್ಷದ ಲಕ್ಷ್ಮಮ್ಮ ಎನ್ನುವವರು ತನ್ನ ಸೊಸೆಯನ್ನು ಮಾರ್ಥಾಸ್ ಆಸ್ಪತ್ರೆಯಲ್ಲಿ ಹೆರಿಗೆಗೋಸ್ಕರವಾಗಿ ಸೇರಿಸಿದ್ದುದರಿಂದ ಆಕೆಗೆ ಊಟ ಕೊಡಲು ಹೋಗುತ್ತಿದ್ದರು. ಆದರೆ ದಾರಿಯಲ್ಲಿ ಒಬ್ಬ ಸ್ಟೇಟ್ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟಿನ ಹೆಡ್ ಕಾನ್ಸ್‌ಟೆಬಲ್ ಡಿಪಾರ್ಟ್‌ಮೆಂಟಿನ ಬೈಸಿಕಲ್ಲಿನಲ್ಲಿ ಸವಾರಿ ಮಾಡುತ್ತಿರುವಾಗ ಸದರಿ ಹೆಂಗಸಿಗೆ ವಾಹನ ತಾಗಿಸಿದ ಕಾರಣ ಆಕೆಯ ತಲೆಗೆ ದೊಡ್ಡ ಪೆಟ್ಟಾಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿರುತ್ತಾಳೆ. ಹೆಚ್.ಸಿ.ಯು ಬೈಸಿಕಲ್ಲಿನಿಂದ ಆಕ್ಸಿಡೆಂಟ್ ಆದ ಕಾರಣ ಈಗ ಆ ಕೇಸ್‌ನ್ನು ಹಾಕದೇ ಆದನ್ನು ಮುಚ್ಚಿ ಹಾಕಲು ನೋಡುತ್ತಿರುವುದನ್ನು ಸರ್ಕಾರದವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತವಾದ ವಿಚಾರಣೆ ನಡೆಸಿ ಸತ್ತ ಕುಟುಂಬದವರಿಗೆ ನ್ಯಾಯ ದೊರಕಿಸಿಕೊಡಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಕಾನೂನು ಪ್ರಕಾರವಾಗಿ ಮುಚ್ಚಿಡಬೇಕಾದ ಅವಶ್ಯಕತೆ ಇಲ್ಲ, ಪೋಲೀಸಿನವರೇ ಆಗಲೀ ಯಾರೇ ಆಗಲೀ ಆಕ್ಸಿಡೆಂಟ್‌ನಿಂದ ಮರಣ ಹೊಂದಿದುದರಿಂದ ಕಟ್ಟುನಿಟ್ಟಾಗಿ ಕಾನೂನಿನ ಪ್ರಕಾರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ತಕ್ಷಣವೇ ಸಂಬಂಧಪಟ್ಟವರಿಗೆ ಆದೇಶ ಕೊಡುತ್ತೇನೆ

(V) ಸ್ಟೇಟ್ ಲೈಬ್ರರಿಯನ್ ನೇಮಕಾತಿಯ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಪಾಯಿಂಟ್‌ಮೆಂಟ್ ಆಫ್ ಸ್ಟೇಟ್ ಲೈಬ್ರರಿಯನ್ ನೇಮಕ ಮಾಡುವಾಗ ಏನಾಗಿದೆ ಅಂದರೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಿಂದ ಬಂದವರನ್ನು ಸ್ಟೇಟ್ ಲೈಬ್ರರಿಯನ್ ಆಗಿ ಅಪಾಯಿಂಟ್ ಮಾಡಿದ್ದಾರೆ. ರೂಲ್ಸ್ ಪ್ರಕಾರ ಲೈಬ್ರರಿ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕ ಒಬ್ಬರಿಗೆ ಪ್ರಮೋಷನ್ ಕೊಡಬೇಕು. ಹಾಗೆ ಮಾಡದಿದ್ದರೆ ಕಾನೂನಿಗೆ ವಿರೋಧವಾಗುತ್ತದೆಂದು ಸೆಕ್ಷನ್ ೧೫ರ ಪ್ರಕಾರ ಗೊತ್ತಾಗುತ್ತದೆ. ಕಾರಣಾಂತರಗಳಿಂದ ಲೋಯರ್ ಗ್ರೇಡ್‌ನಲ್ಲಿರತಕ್ಕವರಿಗೆ ಅದರಲ್ಲೂ ಎರವಲು ಸೇವೆಯ ಮೇಲೆ ಬಂದವರಿಗೆ ಸ್ಟೇಟ್ ಲೈಬ್ರರಿಯನ್ ಆಗಿ ಅಪಾಯಿಂಟ್ ಮಾಡಿದ್ದಾರೆ. ಅದೇ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕವರಿಗೆ ಅನ್ಯಾಯ ಮಾಡಿದ್ದಾರೆ. ಫೆಬ್ರುವರಿ ೧೯೮೪ರಲ್ಲಿ ಮಾನ್ಯ ಶಿಕ್ಷಣ ಸಚಿವರು ಒಂದು ಮಾತು ಹೇಳಿದ್ದಾರೆ. ನಾವು ಬೇರೆ ಡಿಪಾರ್ಟ್‌ಮೆಂಟ್‌ನಿಂದ ಎರವಲು ಸೇವೆಯ ಮೇಲೆ ಬಂದವರಿಗೆ ಪ್ರಮೋಷನ್ ಕೊಡುವುದಿಲ್ಲ, ಅದೇ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕವರಿಗೆ ಪ್ರಮೋಷನ್ ಕೊಡುತ್ತೇವೆಂದು ಹೇಳಿದ್ದಾರೆ ಈಗ ಅದಕ್ಕೆ ತದ್ವಿರುದ್ಧವಾಗಿ ಅದೇ ಡಿಪಾರ್ಟ್‌ಮೆಂಟಿನ ಜನರನ್ನು ಬಿಟ್ಟು ಬೇರೆ ಎಜುಕೇಶನ್ ಡಿಪಾರ್ಟ್‌ಮೆಂಟ್‌ನಿಂದ ಬಂದಿರತಕ್ಕ